ಕಾಯೋ ಜಿತಾಮಿತ್ರ ಯಮಿಕುಲನಾಯಕ ಸುಚರಿತ್ರ ॥ ಪ. ॥

ಕಾಯೊ ಕಾಯೋ ಜಿತಕಾಯ ಜಾತ ಶಿತ–।
ಕಾಯ ನಿನ್ನ ಪದತೋಯಜಕೆರಗುವೆ ॥ ಅ.॥

ಅಭಯದಾತನೆಂದು ತ್ವತ್ಪದಕಭಿನಮಿಸುವೆ ಬಂದು ।
ಕುಭವಕುದರಪವಿ ಶುಭಗುಣ ನಿಧಿ ಗುರು। ವಿಭುದೇಂದ್ರರ ಕರಾಬುಜಸಂಭೂತ ॥ 1 ॥

ಮೌನಿಕುಲಾಧೀಶ ಪ್ರಾರ್ಥಿಪೆ ಭಾನುಸುಪ್ರಕಾಶ । ದೀನಜನಾಮರಧೇನು
ಪುರಾತನಗೋನದ ನಿರುನಿಜತಾಣಗೈದ ಗುರು ॥ 2 ॥

ತುಂಗಮಹಿಮಭರಿತ ಕುಮತ್ವದಿಜಂಗಮದ್ವಿಜನಾಥ । ಮಂಗಳಕೃಷ್ಣ
ತರಂಗಿಣಿ ಭೀಮ। ಸಂಗಮದಲ್ಲಿ ಸಲೇಕಂಗೊಳಿಸುವ ಗುರು ॥ 3 ॥

ಮರುತಸುಮತಶರಧಿಸುಧಾಕರ  ದುರಿತಕದಳಿದ್ವಿರದ । ಧರಣಿದಿವಿಜಪರಿವಾರ ।
ನಮಿತ ನಿಜಕರುಣಿ ನಂಬಿದೆನೊ ಮರೆಯದೆ ನಿರುತ ॥ 4 ॥

ಕಂದುಗೊರಳವಿನುತಶ್ಯಾಮಸುಂದರಾಂಘ್ರಿದೂತ । ಪೊಂದಿದ ಜನರ
ಅಘವೃಂದ ಕಳೆವ ರಘುನಂದನಮುನಿಮನಮಂದಿರವಾಸ ॥ 5 ॥